

















ಕ್ರಿಸ್ತನ ಜನನ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮತ್ತಾಯ 1, 2 ಅಧ್ಯಾಯಗಳು ಮತ್ತು ಲೂಕ 1, 2 ಅಧ್ಯಾಯಗಳು

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

ಬರಹಗಾರರು: Edward Hughes
ಪದ್ಮಾ ಸೈಲೇಸ್: Padma Silas
ಚಿತ್ರಲೇಖಕರು: M. Maillot
ಅಳವಡಿಸುವವರು: E. Frischbutter; Sarah S.

60ರ 36ನೇ ಕಥೆ

M1914.org

**Bible for Children, PO Box 3, Winnipeg MB R3C 2G1 Canada**

ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.

ಕನ್ನಡ Kannada







ಆ ಯೌವನಸ್ಥ ಹುಡುಗಿಯು, “ಇದು ಹೇಗೆ ಸಾಧ್ಯ? ನನಗಿನ್ನು ಮದುವೆ ಆಗಿಲ್ಲವಲ್ಲ” ಎಂದು ದೂತನಿಗೆ ಕೇಳಿದಳು. ಆ ದೂತನು ಆಕೆಗೆ ಆ ಮಗುವು ದೇವರಿಂದ ಕೊಡಲ್ಪಡುವದರಿಂದ ಮನುಷ್ಯನೊಬ್ಬನು ಅದಕ್ಕೆ ತಂದೆಯಾಗುವ ಅವಶ್ಯಕತೆಯಿಲ್ಲ ಎಂದು ಹೇಳಿದನು.
3
ದೇವದೂತನು ಮರಿಯಳಿಗೆ ಆಕೆಯ ಬಂಧುವಾದ ಎಲೀಸಬೇತಳ ಕುರಿತು ತಿಳಿಸಿದನು. ಎಲೀಸಬೇತಳು ಮುದುಕಿಯಾಗುತ್ತಿದ್ದರೂ ಆಕೆಗೆ ಮಗು ಹುಟ್ಟಲಿಕ್ಕಿತ್ತು. ಅದೊಂದು ಮಹತ್ಕಾರ್ಯವಾಗಿದ್ದಂತೆ ಮರಿಯಳದ್ದು ಮಹತ್ಕಾರ್ಯವೇ ಆಗಿರುತ್ತದೆಂದು ಹೇಳಿದನು. ಮರಿಯಳು ತಕ್ಷಣವೇ ಎಲೀಸಬೇತಳ ಮನೆಗೆ ಹೋದಳು. ಅವರಿಬ್ಬರೂ ದೇವರನ್ನು ಸ್ತುತಿಸಿದರು.
4
ಮರಿಯಳು ಯೋಸೇಫನೆಂಬ ಮನುಷ್ಯನೊಂದಿಗೆ ಮದುವೆಯಾಗಲಿಕ್ಕಿದ್ದಳು. ಮರಿಯಳು ಒಂದು ಮಗುವಿಗೆ ತಾಯಿಯಾಗಲಿರುವ ವಿಷಯವನ್ನು ಕೇಳಿ ಅವನು ದುಃಖ ಪಟ್ಟನು. ಆ ಮಗುವಿನ ತಂದೆ ಇನ್ನೊಬ್ಬ ಮನುಷ್ಯನಾಗಿರ ಬಹುದೆಂದು ಅಂದುಕೊಂಡನು.
5
ದೇವರ ದೂತನು ಯೋಸೇಫನಿಗೆ ಕನಸ್ಸಿನಲ್ಲಿ ಕಾಣಿಸಿಕೊಂಡು ಮರಿಯಳಿಗೆ ಹುಟ್ಟಲಿರುವ ಮಗುವು ದೇವರ ಮಗನೆಂದು ಮತ್ತು ಆ ಮಗುವನ್ನು ನೋಡಿಕೊಳ್ಳುವದಕ್ಕೆ ಯೋಸೇಫನು ಮರಿಯಳಿಗೆ ಸಹಾಯ ಮಾಡಬೇಕೆಂದು ಹೇಳಿದನು.
6
ಯೋಸೇಫನು ದೇವರ ಮಾತನನ್ನು ನಂಬಿದನು ಮತ್ತು ಆತನಿಗೆ ವಿಧೇಯನಾದನು. ಅವನು ದೇಶದ ಅಧಿಕಾರಿಯ ಅಪ್ಪಣೆಗೆ ವಿಧೇಯನಾದನು. ಹೊಸ ಅಪ್ಪಣೆಯ ಪ್ರಕಾರ ಅವನು ಮರಿಯಳೊಂದಿಗೆ ಅವನ ಸ್ವಂತ ಊರಾದ ಬೆತ್ಲೆಹೇಮಿಗೆ ಹೋಗಿ
ಅಲ್ಲಿ ತೆರಿಗೆಯನ್ನು ಕೊಡಬೇಕಿತ್ತು.
7
ಮರಿಯಳು ಮಗುವಿಗೆ ಜನ್ಮ ನೀಡುವ ಸಮಯವು ಬಂದಿತ್ತು. ಆದರೆ ಅವರಿಗೆ ಇಳುಕೊಳ್ಳುವದಕ್ಕೆ ಸ್ಥಳ ಸಿಕ್ಕಲಿಲ್ಲ, ಎಲ್ಲಾ ಛತ್ರಗಳು ತುಂಬಿಹೋಗಿದ್ದವು. ಯೋಸೇಫನು ಸ್ಥಳಕ್ಕಾಗಿ ತುಂಬಾ ಹುಡುಕಿದನು.
8
ಕಡೆಗೆ ಯೋಸೇಫನು ದನದ ಕೊಟ್ಟಿಗೆಯಲ್ಲಿ ಸ್ವಲ್ಪ ಸ್ಥಳವನ್ನು ಕಂಡುಕೊಂಡನು. ಅವರು ಅಲ್ಲಿ ಇಳುಕೊಂಡರು. ಆ ರಾತ್ರಿ ಮಗುವಾದ ಯೇಸು ಹುಟ್ಟಿದನು. ಮರಿಯಳು ಮಗುವನ್ನು ಗೋದಲಿಯಲ್ಲಿ ಮಲಗಿಸಿದಳು. ಗೋದಲಿಯಲ್ಲಿ ದನಗಳಿಗಾಗಿ ಮೇವು ಹಾಕಲಾಗುತ್ತದೆ.
9
ಅಲ್ಲಿಂದ ಸ್ವಲ್ಪ ದೂರದಲ್ಲಿ ಕುರುಬರು ಹೊಲದಲ್ಲಿ ತಮ್ಮ ಕುರಿಗಳನ್ನು ಕಾಯುತ್ತಿದ್ದರು. ದೇವದೂತನು ಅವರಿಗೆ ಕಾಣಿಸಿಕೊಂಡು ಮಗುವು ಹುಟ್ಟಿದ ಸಂತೋಷದ ಸುದ್ದಿಯನ್ನು ತಿಳಿಸಿದನು.
10
“ಈ ಹೊತ್ತು ನಿಮಗೋಸ್ಕರ ದಾವೀದನ ಊರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ ಆತನು ಕರ್ತನಾಗಿರುವ ಕ್ರಿಸ್ತನೇ. ಆ ಮಗುವು ಗೋದಲಿಯಲ್ಲಿ ಮಲಗಿರುವದನ್ನು ಕಾಣುವಿರಿ.”
11
ಪಕ್ಕನೆ ದೇವದೂತರ ದೊಡ್ಡ ಗುಂಪು ಅವರಿಗೆ ಕಾಣಿಸಿತು.
12
“ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ, ಮನುಷ್ಯರೊಳಗೆ ಸಮಾಧಾನ” ಎಂದು ಅವರು ದೇವರನ್ನು ಕೊಂಡಾಡುತ್ತಾ ಹೇಳಿದರು.
13
ಕುರುಬರು ಬೇಗನೇ ಗೋದಲಿಯ ಬಳಿಗೆ ಹೋದರು. ಆ ಮಗುವನ್ನು ನೋಡಿದ ಮೇಲೆ ದೇವದೂತರು ಅವರಿಗೆ ತಿಳಿಸಿದ ಸಂಗತಿಯನ್ನು ಅಲ್ಲಿದ್ದ ಜನರಿಗೆಲ್ಲಾ ಹೇಳಿದರು.
14
ನಾಲ್ವತ್ತು ದಿನಗಳಾದ ಮೇಲೆ ಯೋಸೇಫನು ಮತ್ತು ಮರಿಯಳು ಮಗುವನ್ನು ಯೆರೂಸಲೇಮಿನಲ್ಲಿದ್ದ ದೇವಾಲಯಕ್ಕೆ ತೆಗೆದುಕೊಂಡು ಹೋದರು. ಅಲ್ಲಿ ಸಿಮೆಯೋನನೆಂಬ ಒಬ್ಬ ಮನುಷ್ಯನಿದ್ದನು. ಅವನು ಆ ಮಗುವಿಗಾಗಿ ದೇವರನ್ನು ಸ್ತುತಿಸಿದನು. ಅದೇ ಸಮಯದಲ್ಲಿ ಅಲ್ಲಿಗೆ ಅನ್ನಳು ಎಂದ ಹೆಣ್ಣು ಮಗಳು ಬಂದು ಆಕೆ ಕೂಡ ದೇವರನ್ನು ಸ್ತುತಿಸಿದಳು.
15
ಅವರಿಬ್ಬರೂ ಯೇಸು ದೇವರ ಮಗನೆಂದು ಮತ್ತು ವಾಗ್ದಾನದ ರಕ್ಷಕನು ಆಗಿದ್ದಾನೆಂದು ತಿಳಿದಿದ್ದರು. ಯೋಸೇಫನು ಎರಡು ಪಕ್ಷಿಗಳನ್ನು ಯಜ್ಞವಾಗಿ ಅರ್ಪಿಸಿದನು. ದೇವ ಜನರು ಹೊಸದಾಗಿ ಹುಟ್ಟಿದ ತಮ್ಮ ಮೊದಲನೆಯ ಮಗನನ್ನು ದೇವರಿಗೆ ಒಪ್ಪಿಸಬೇಕಿತ್ತು.
ಬಡವರಾದವರು ಆ ಸಮಯದಲ್ಲಿ ಎರಡು ಪಕ್ಷಿಗಳನ್ನು ಅರ್ಪಿಸಬೇಕಿತ್ತು.
16
ಸ್ವಲ್ಪ ಸಮಯದ ನಂತರ ಕಾಣಿಸಿಕೊಂಡ ವಿಶೇಷವಾದ ನಕ್ಷತ್ರವೊಂದು ಮೂಡಣ ದೇಶದ ಪಂಡಿತರನ್ನು ಯೆರೂಸಲೇಮಿಗೆ ನಡೆಸಿತು.
ಅವರು ಅರಸನಾದ ಹೆರೋದನ ಅರಮನೆಗೆ ಬಂದು, “ಯೆಹೂದ್ಯರ ಅರಸನಾಗಿ ಹುಟ್ಟಿದವನು ಎಲ್ಲಿ? ನಾವು ಆತನನ್ನು ಆರಾಧಿಸಲು ಬಂದಿರುವೆವು” ಎಂದು ಹೇಳಿದರು.
17
ಪಂಡಿತರು ಹೇಳಿದ್ದನ್ನು ಅರಸನಾದ ಹೆರೋದನು ಕೇಳಿ ಗಲಿಬಿಲಿಗೊಂಡನು. ಅವನು ಅವರನ್ನು ಕರೆದು, “ನೀವು ಆತನನ್ನು ಕಂಡುಕೊಂಡ ಮೇಲೆ, ಆತನ ಎಲ್ಲಿದ್ದಾನೆಂದು ಬಂದು ನನಗೆ ತಿಳಿಸಿರಿ. ನಾನೂ ಆತನನ್ನು ಆರಾಧಿಸುವೆನು” ಎಂದು ಹೇಳಿದನು. ಆದರೆ ಹೆರೋದನು ಸುಳ್ಳು ಹೇಳಿದನು. ಅವನು ಯೇಸುವನ್ನು ಕೊಂದು ಬಿಡಲು ಆಲೋಚಿಸಿದನು.
18